■ ಹನಿ

## ಸಂಜಯನೆಂಬ ಮೂರ್ಖ



'ಈತ ಉಗ್ರಗಾಮಿಯಲ್ಲ; ಆದರೆ ಉಗ್ರ ಮೂರ್ಖ' ಎನ್ನುವ ವಕೀಲರ ಮಾತು ಸರಿಯಾಗಿಯೇ ಇದೆ. ಆದರೆ ನ್ಯಾಯಮೂರ್ತಿಯ ಸ್ಥಾನದಲ್ಲಿ ಕುಳಿತವರು ಕರುಣೆಯ ಸಾಕಾರಮೂರ್ತಿ ಆಗಿರಲೇಬೇಕೆಂದಿಲ್ಲವಲ್ಲ. ಸಂಜಯ್ ದತ್ ಎಂಬ ಬಾಲಿವುಡ್‌ನ ಬಿಗ್ ಸ್ಟಾರ್, ಐದು ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿದ್ದಾನೆ. ವಾಸ್ತವವಾಗಿ ಟಾಡಾ ಕೋರ್ಟ್ ನೀಡಿದ 6 ವರ್ಷಗಳ ಜೈಲು ಶಿಕ್ಷೆಯ ತೀರ್ಪನ್ನು ಸುಪ್ರೀಂಕೋರ್ಟ್ ನ್ಯಾಯಾಧೀಶರು ಒಂದು ವರ್ಷ ಕಡಿತ ಮಾಡಿದ್ದಾರೆ. ಈಗಾಗಲೆ ಒಂದೂವರೆ ವರ್ಷ ಜೈಲಿನಲ್ಲಿ ಕಳೆದು ಜಾಮೀನಿನ ಮೇಲೆ ಹೊರಗಿದ್ದ ಸಂಜಯ್ ದತ್, ಇನ್ನು ಮೂರೂವರೆ ವರ್ಷ ಜೈಲಿನಲ್ಲಿ ಕಳೆಯಬೇಕಿದೆ. ಮೇಲ್ಮನವಿ ಸಲ್ಲಿಸಲು ನ್ಯಾಯಾಧೀಶರು ಅವಕಾಶ ಮಾಡಿಕೊಟ್ಟಿರುವುದು ಆತನ ಕುಟುಂಬ, ಮಿತ್ರರಲ್ಲಿ ಸಣ್ಣ ಆಶಾಭಾವನೆ ಮೂಡಿಸಿದೆ. ಆದರೆ ತೀರ್ಪು ಪ್ರಕಟವಾದ ತಕ್ಷಣ ವೇದಾಂತಿಯಂತೆ ಮಾತನಾಡಿರುವ ಸಂಜಯ್ ಪೂರ್ತಿ ಹತಾಶನಾಗಿರುವುದಂತೂ ನಿಜ.

1993ರಲ್ಲಿ ಮುಂಬೈಯಲ್ಲಿ ನಡೆದ ಬಾಂಬ್‌ಸ್ಫೋಟ 257 ಜನರನ್ನು ಬಲಿ ತೆಗೆದುಕೊಂಡದ್ದು ನಮ್ಮ ಇತಿಹಾಸ ಎಂದೂ ಕ್ಷಮಿಸದ ಘಟನೆ. ಆ ಸರಣಿ ಬಾಂಬ್ ಸ್ಫೋಟಗಳಿಗೆಂದೇ ಉಗ್ರರು ವಿದೇಶದಿಂದ ತರಿಸಿದ್ದ ಶಸ್ತ್ರಾಸ್ತ್ರಗಳಲ್ಲಿ ಒಂದು 9 ಎಂಎಂ ಪಿಸ್ತೂಲ್ ಮತ್ತು ಒಂದು ಎಕೆ-57 ರೈಫಲ್ ಸಂಜಯ್ ದತ್ ಮನೆಯಲ್ಲಿ ಸಿಕ್ಕಿದ್ದೇ ಈಗ ಆತ ಜೈಲು ಕಂಬಿ ಎಣಿಸಲು ಕಾರಣವಾಗಿದೆ. ನೇರವಾಗಿ ಭಯೋತ್ಪಾದನೆಯಲ್ಲಿ ಭಾಗವಹಿಸದಿದ್ದರೂ ಅಕ್ರಮವಾಗಿ ಶಸ್ತ್ರಾಸ್ತ್ರ ಹೊಂದಿದ್ದೇ ಆತನಿಗೆ ಮುಳುವಾಗಿದೆ.

30 ವರ್ಷಗಳ ಹಿಂದೆ ಭುಜಕ್ಕೆ ಇಳಿಬಿದ್ದ ಕೂದಲು, ಅಮಲುಗಣ್ಣು, ಅಜಾನುಬಾಹು ದೇಹದೊಂದಿಗೆ ಸೊಕ್ಕಿನಿಂದ ನಡೆದಾಡುತ್ತಿದ್ದ ಸಂಜಯ್ ದತ್ ಈಗ ಸಾಕಷ್ಟು ಬದಲಾಗಿದ್ದಾನೆ ಅನ್ನುವುದು ನಿಜವೇ. ಈಗ ಆತ ಪತ್ನಿ ಮತ್ತು ಮೂವರು ಮಕ್ಕಳನ್ನು ಹೊಂದಿರುವ ಸದ್‌ಗೃಹಸ್ಥ. ಒಮ್ಮೆ ಜೈಲಿಗೆ ಹೋಗಿ ಬಂದ ಬಳಿಕ ವೃತ್ತಿಯ ಬಗ್ಗೆಯೂ ಆತ ಸೀರಿಯಸ್ ಆಗಿದ್ದಾನೆ. ಈಗ ಹೀರೊ ಅಲ್ಲದಿದ್ದರೂ, ಬಿಗ್ ಬಜೆಟ್ ಸಿನಿಮಾಗಳಲ್ಲಿ ಪ್ರಮುಖ ಪಾತ್ರಗಳನ್ನು ಪಡೆಯುತ್ತಿರುವ ಆತನ ಮೇಲೆ ಬಾಲಿವುಡ್ ಸುಮಾರು 388 ಕೋಟಿ ರೂಪಾಯಿಗಳನ್ನು ಹೂಡಿಕೆ ಮಾಡಿ ಕುಳಿತಿದೆ. ಇನ್ನು ಮೂರೂವರೆ ವರ್ಷ ಈ ಹಣಕ್ಕೆ ಬಡ್ಡಿ ಕಟ್ಟುವುದಷ್ಟೇ ನಿರ್ಮಾಪಕರು ಮಾಡಬಹುದಾದ ಕೆಲಸ.

ಎಲ್ಲ ಸರಿ ಇದ್ದಿದ್ದರೆ ಬಹುಶಃ ಸಂಜಯ್ ದತ್, ಮಾಧುರಿ ದೀಕ್ಷಿತ್‌ಳನ್ನೇ ಮದುವೆ ಆಗುತ್ತಿದ್ದನೇನೋ. ಇವರಿಬ್ಬರ ಮಧುರ ಬಾಂಧವ್ಯದ ಬಗ್ಗೆ ಸುದ್ದಿ ಹಬ್ಬಿರುವಾಗಲೇ ಸಂಜಯ್ ದತ್ ಅರೆಸ್ಟ್ ಆದದ್ದು. ಮಾಧುರಿ ಅಮೆರಿಕದಲ್ಲಿ ಸುಖಸಂಸಾರ ಕಂಡುಕೊಂಡಳು. ಆ ಬಳಿಕ ರಿಹಾ ಪಿಳ್ಳೈ ಎಂಬ ಗೆಳತಿಯೂ ಕೈಬಿಟ್ಟಳು. ಆದರೆ ಕೈ ಹಿಡಿದ ಮಾನ್ಯತಾ, ಸಂಜಯನ ಬಾಳಿನಲ್ಲಿ ಹೊಸ ದೀಪ ಬೆಳಗಿಸಿದ್ದಳು. ಈಗ ಇತಿಹಾಸ ಇನ್ನೊಂದು ಸುತ್ತು ಬಂದಂತಿದೆ. ಹಣದ, ಕೀರ್ತಿ ಸೊಕ್ಕಿನಿಂದ ಮಾಡಿದ ಒಂದೇ ಒಂದು ಮೂರ್ಖ ಕೆಲಸ ಜೀವಮಾನವಿಡೀ ಈತ ನರಳುವಂತೆ ಮಾಡಿದೆ. ಯಾರು ಎಷ್ಟೇ ಬೆಂಬಲ ವ್ಯಕ್ತಪಡಿಸಿದರೂ, ಜೈಲಿನಲ್ಲಿ ಆತ ಒಬ್ಬಂಟಿಯೇ.

## ಜ್ವಾಲಾ-ಮುಖಿ!

ಅಂತೂ ಇಂತೂ ಬ್ಯಾಡ್ಮಿಂಟನ್ ಕೋರ್ಟ್‌ನಿಂದ ಜ್ವಾಲಾ ಗುಟ್ಟಾ ಹೊರಬೀಳುವುದಕ್ಕೆ ರಂಗ ಸಿದ್ಧತೆಯಾಗಿದೆ. ಭಾರತೀಯ ಬ್ಯಾಡ್ಮಿಂಟನ್ ಅಸೋಸಿಯೇಶನ್ ಜತೆಗಿನ ಕಾನೂನು ಹೋರಾಟ, ಕೋಚ್ ಪುಲ್ಲೇಲ ಗೋಪಿಚಂದ್ ಜತೆಗಿನ ತಿಕ್ಕಾಟ ಎಲ್ಲವೂ ಪ್ರತಿಭಾನ್ವಿತ ಕ್ರೀಡಾ ತಾರೆಯೊಬ್ಬಳ ದುರದೃಷ್ಟಕರ ನಿರ್ಗಮನಕ್ಕೆ ಹಿಮ್ಮೇಳ ಒದಗಿಸಿವೆ. 2010ರವರೆಗೆ 13 ಸಲ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್ ಆಗಿ ಮಿಂಚಿದ ಜ್ವಾಲಾ ಗುಟ್ಟಾ, ಸದ್ಯಕ್ಕೆ ಯಾವುದೇ ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಭಾಗವಹಿಸುವ ಸಾಧ್ಯತೆಗಳು ಕಂಡುಬರುತ್ತಿಲ್ಲ. ಡಬಲ್ಸ್ ಮತ್ತು ಮಿಕ್ಸೆಡ್ ಡಬಲ್ಸ್‌ನಲ್ಲಿ ಅದ್ವಿತೀಯ ಆಟಗಾರ್ತಿಯಾಗಿರುವ ಜ್ವಾಲಾ, ಇನ್ನೀಗ ತೆಲುಗು ಚಿತ್ರರಂಗದಲ್ಲಿ ಮಿಂಚಲು ದಾರಿ ಸುಗಮವಾಗಿದೆ.




ಕಳೆದ ವಾರ ತೆಲುಗು ಚಿತ್ರ 'ಗುಂಡೇ ಜರಿ ಜಲಂತಾಯಿಂಡೆ'ಯಲ್ಲಿ ಹೀರೋ ನಿತಿನ್ ರೆಡ್ಡಿ ಜತೆಗೆ ಜ್ವಾಲಾ ಭರ್ಜರಿ ಡ್ಯಾನ್ಸ್ ಒಂದರಲ್ಲಿ ಹೆಜ್ಜೆ ಹಾಕಿದ್ದಾಳೆ. ಈ ಚಿತ್ರ ಏಪ್ರಿಲ್‌ನಲ್ಲಿ ತೆರೆ ಕಾಣಲಿದ್ದು, ಇನ್ನೂ 2-3 ಸಿನಿಮಾಗಳಲ್ಲಿ ಹೀರೋಯಿನ್ ಪಾತ್ರಗಳಿಗೆ ಈಕೆಗೆ ಆಫರ್ ಬಂದಿದೆ. 'ಇನ್ನೊಂದು ವರ್ಷ ಆಟವಾಡಬಹುದು. ಆ ಬಳಿಕ ಏನಿದ್ದರೂ ಫುಲ್‌ಟೈಮ್ ಸಿನಿಮಾ' ಎಂದು ಈ ಬಿಂದಾಸ್ ಸುಂದರಿ ಹೇಳಿಯೂ ಆಗಿದೆ. ಇನ್ನೂ 29ರ ಹರೆಯದ, ಈ ಅರ್ಜುನ ಪ್ರಶಸ್ತಿ ವಿಜೇತೆ, ಆರಂಭ ದಿಂದಲೂ ತನ್ನ ಮನಸ್ಸಿನ ನೇರಕ್ಕೆ ನಡೆದುಕೊಂಡು ಬಂದವಳು. ಅಜರುದ್ದೀನ್ ಜತೆಗಿನ ಸ್ನೇಹದಿಂದಾಗಿ ಗಂಡ ಚೇತನ್ ಆನಂದ್‌ನಿಂದ ಡೈವೋರ್ಸ್ ಪಡೆದ ಈಕೆ, ಈಗಲೂ ದಿಟ್ಟ ನಡೆಯ ಗಟ್ಟಿಗಿತ್ತಿ. ಇಲ್ಲವಾದಲ್ಲಿ ಪುರುಷ ಪ್ರಧಾನ ಕ್ರೀಡಾಕ್ಷೇತ್ರದಲ್ಲಿ ಇಷ್ಟೊಂದು ಗಟ್ಟಿಯಾಗಿ ನೆಲೆ ನಿಲ್ಲುವುದು ಸಾಧ್ಯವಿರಲಿಲ್ಲ. ಸಿನಿಮಾದಲ್ಲಿ ಈಕೆಯ 'ಸ್ಟಾರ್' ಹೇಗಿದೆಯೋ ಕಾದು ನೋಡಬೇಕು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65